ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್
ನೋಂದಾಯಿತ ಕಛೇರಿ: 1ನೇ ಮಹಡಿ, ಪಾಲಿಕೆ ಕಟ್ಟಡ ಬ್ಲಾಕ್.
ಎಸ್.ಎನ್ ಮಾರ್ಕೆಟ್, ನೆಹರು ರಸ್ತೆ, ಶಿವಮೊಗ್ಗ – 577201

SHIVAMOGGA SMART CITY LIMITED
Regd Office: 1st Floor, Corporation Building block,
SN Market, Nehru Road, Shivamogga – 577201

CIN: U74999KA2017PLC100268, GSTIN: 29AAYCS3808B1Z0, PAN: AAYCS3808B, TAN: BLRS63059D
Web: http://shivamoggasmartcity.co.in / E-mail: shimogasmartcity@gmail.com / Phone No: 08182-279951

ಸಂ.ಆಡಳಿತ/189/ಟುಲಿಪ್/2022 ದಿ: 27.07.2022

**ಕೇಂದ್ರ ಸರ್ಕಾರದಿಂದ ಶಿವಮೊಗ್ಗ ಸ್ಮಾರ್ಟ್ ಸಿಟಿಯಲ್ಲಿ ಟುಲಿಪ್(The Urban Learning Internship Programme-TULIP) ಇಂಟರ್ನ್‌ಶಿಪ್‌ಗೆ ಆಹ್ವಾನ**

ತಾಂತ್ರಿಕ ಶಿಕ್ಷಣ ಹಿನ್ನೆಲೆಯೂ ಸೇರಿದಂತೆ ಹೊಸ ಪದವೀಧರರಿಗೆ ಸಿವಿಲ್ ಕಾಮಗಾರಿ ನಿರ್ವಹಣೆ, ನಗರ ಯೋಜನೆ, ಹಣಕಾಸು, ಪರಿಸರ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಪ್ರಾಯೋಗಿಕ ತರಬೇತಿ ಪಡೆಯಲು ಅನುವಾಗುವ ಈ ಯೋಜನೆಯಲ್ಲಿ ಅರ್ಹ ಪದವೀಧರರು ರೂ.5000/- ಸ್ಟೈಫಂಡ್‌ನೊಂದಿಗೆ ಆರು ತಿಂಗಳ ಇಂಟರ್ನ್‌ಶಿಪ್ ಪಡೆಯಲು ಅವಕಾಶವಿರುತ್ತದೆ.

ಈ ಸಮಗ್ರ ಸ್ವರೂಪದ ಯೋಜನೆಯಿಂದ ಸ್ಮಾರ್ಟ್ ಸಿಟಿಗಳ ವ್ಯಾಪ್ತಿಯಲ್ಲಿ ಯುವಕರುಗಳ ಹೊಸ ವಿಚಾರಗಳನ್ನು ಅಳವಡಿಸಿಕೊಳ್ಳಲು ಅವಕಾಶವಾಗುವುದಲ್ಲದೇ ಈ ರೀತಿ ತರಬೇತಿ ಪಡೆದ ಅಭ್ಯರ್ಥಿಗಳು ಹಲವು ಪ್ರಾಕಾರಗಳ ಉದ್ಯೋಗಾವಕಾಶಕ್ಕೂ ಪೂರಕವಾದ ಅರ್ಹತೆ ಪಡೆಯುವ ಸಾಧ್ಯತೆ ಇರುತ್ತದೆ.

ಈ ಯೋಜನೆಯು ಕೇಂದ್ರದ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿಯ ಸಹಯೋಗದೊಂದಿಗೆ ನಿರ್ವಹಿಸಲ್ಪಡುವ ಜಂಟಿ ಕಾರ್ಯಚರಣೆಯಾಗಿದ್ದು, ಹೆಚ್ಚಿನ ಮಾಹಿತಿಯನ್ನು https://internship.aicte-india.org/ ಜಾಲತಾಣದಲ್ಲಿ ಅಥವಾ ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್ ಕಛೇರಿಯಲ್ಲಿ ವೈಯಕ್ತಿಕವಾಗಿ ಪಡೆಯಬಹುದಾಗಿದೆ

ಈಗಾಗಲೇ 64 ಪದವೀದರರು ಈ ಯೋಜನೆಯ ಸೌಲಭ್ಯ ಪಡೆದಿದ್ದು, ಪ್ರಸ್ತುತ ಸಿವಿಲ್ ವಿಭಾಗ-13, ವಿದ್ಯುತ್ ವಿಭಾಗ-5, ಎಲೆಕ್ಟ್ರಾನಿಕ ಅಂಡ್ ಕಮ್ಯುನಿಕೇಷನ್ ವಿಭಾಗ- 6, ಆಡಳಿತ ವಿಭಾಗ-2, ಕಂಪನಿ ಕಾರ್ಯದರ್ಶಿ ವಿಭಾಗ-3, ಡಾಟಾ ಸೈನ್ಸ್ ವಿಭಾಗ-3, ಅರ್ಬನ್ ಪ್ಲಾನಿಂಗ್ ವಿಭಾಗದಲ್ಲಿ-2 ಒಟ್ಟು 34 ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ಉಳಿದಿರುತ್ತದೆ. ಆಸಕ್ತ ಅರ್ಹ ಪದವೀಧರರು ಮೇಲ್ಕಂಡ ಜಾಲತಾಣದಲ್ಲಿ ದಿನಾಂಕ: 30.08.2022 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ, ಕೇಂದ್ರ ಸರ್ಕಾರದಿಂದ ಪ್ರಾಯೋಜಿತವಾದ ಈ ಯೋಜನೆಯ ಸದುಪಯೋಗ ಪಡೆಯುವಂತೆ ಕೋರಲಾಗಿದೆ.

(ಚಿದಾನಂದ ಎಸ್. ವಟಾರೆ)
ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿ.

ಗೆ:
ಹಿರಿಯ ಸಹಾಯಕ ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ವಾರ್ತಾ ಭವನ, ಶಿವಮೊಗ್ಗ.

(ರಾಜ್ಯ ಮಟ್ಟದ ಹಾಗೂ ಸ್ಥಳೀಯ ದಿನಪತ್ರಿಕೆಗಳು ಮತ್ತು ವಿದ್ಯುನ್ಮಾನ ವಾಹಿನಿಗಳಲ್ಲಿ ಉಚಿತವಾಗಿ ಸುದ್ಧಿ ಪ್ರಕಟಿಸುವ ಬಗ್ಗೆ)